ಚಿಕ್ಕ, ಚಿಣ್ಣಮ್ಮ, ಚಿಕ್ಕತಾಯಿ, ಸಣ್ಣಮ್ಮಕ್ಕ, ಎಲ್ಲರನ್ನೂ ನೆನೆದರೆ ಕಣ್ಣು ಮಂಜಾಗುತ್ತದೆ! ಅವರು ಕೊಡುತ್ತಿದ್ದ ಒಬ್ಬಟ್ಟಿಗೆ ಎಷ್ಟು ರುಚಿಯಿರುತ್ತಿತ್ತೋ ಹೇಳಲಾರೆ! ಆದರೆ, ಅವರು ತೋರುತ್ತಿದ್ದ ಭಾವುಣಿಕೆಗೆ ಮಾತ್ರ ಯಾವುದೂ ಸಾಟಿಯಿರಲಿಲ್ಲ ಎನ್ನುವುದನ್ನು ನನ್ನ ಮನಸ್ಸು ಹೇಳುತ್ತದೆ.

ರಾಮನವಮಿ ದಿವಸದಂದು ನಮ್ಮ ಕೇರಿಯನ್ನು ಎಂಥದ್ದೋ ಒಂದು ದೈವಿಕ ಕಳೆ ಆವರಿಸಿಕೊಳ್ಳುತ್ತಿತ್ತು. ಕೇರಿಯ ನಡುವೆ ಇದ್ದ 'ಭಜನಾ ಮಂದಿರ'ಕ್ಕೆ ಯುಗಾದಿಗೆ ಮುಂಚಿತವಾಗಿಯೇ ಸುಣ್ಣ-ಬಣ್ಣ ಮಾಡಿರುತ್ತಿದ್ದರು. ಭಜನಾ ಮಂದಿರವೆಂದರೆ ಅಲ್ಲಿ ಬರಿ ದೇವರ ಫೋಟೊಗಳೇ ಇರುತ್ತಿದ್ದವು. ಎಲ್ಲ ಫೋಟೊಗಳ ನಡುವೆ ತುಸು ದೊಡ್ಡದಾಗಿದ್ದು, ವಜನ್ನಾಗಿರುವ ಹಾಗೂ ಕಲಾತ್ಮಕವಾಗಿರುತ್ತಿದ್ದ ರಾಮನ ಪರಿವಾರದ ಫೋಟೊವನ್ನು ಎದ್ದುಕಾಣುವಂತೆ ಕಟ್ಟಿರುತ್ತಿದ್ದರು. ರಾಮನ ಫೋಟೊದ ಮುಂದೆ ಮಂಗಳಾರತಿ ತಟ್ಟೆ, ಉಳಿದಂತೆ ಒಂದು ಮೂಲೆಯಲ್ಲಿ ಗರುಡಗಂಬ, ತಾಳ, ಹಾರ್ಮೋನಿಯಂ, ತಬಲ ಮತ್ತು ಗಂಧದ ಕಡ್ಡಿಗಳು, ಗೋಡೆಯಲ್ಲಿ ನೇತುಹಾಕಿದ ದಮ್ಮಡಿ ಇವಿಷ್ಟೇ ಭಜನೆಮನೆಯ ಸ್ಥಿರಾಸ್ತಿಗಳಾಗಿದ್ದವು.

ಪ್ರತಿ ಶನಿವಾರ ಭಜನೆಮನೆಯನ್ನು ಕೇರಿಯ ಯಾವುದಾದರೂ ಒಂದು ಕುಟುಂಬದವರು ಸಾರಿಸಿ ಒಪ್ಪ ಮಾಡುತ್ತಿದ್ದರು. ಅಂದು ಸಂಜೆಗೆ ಭಜನೆ ನಡೆಯುತ್ತಿತ್ತು. ಅಂದು ನಮ್ಮ ಕೇರಿಯಲ್ಲಿದ್ದ ಖಲಂದರ್ ಸಾಹೇಬರು ಹಾರ್ಮೋನಿಯಂ ನುಡಿಸುತ್ತಿದ್ದರು, ಅವರ ತಮ್ಮ ಪೀರ್ ದಾ ಅವರು ತಬಲ ನುಡಿಸುತ್ತಿದ್ದರು. ಭಜನೆ ಹಾಡುಗಳನ್ನು ಎಲ್ಲಯ್ಯ, ಹನುಮಂತಣ್ಣ, ಚಂದ್ರಣ್ಣ, ನೂರೊಂದಯ್ಯ ಮುಂತಾದವರು ಹಾಡುತ್ತಿದ್ದರು, ದಮ್ಮಡಿಯನ್ನು ಚಿಕ್ಕತಿಮ್ಮಯ್ಯ, ಪಿಳ್ಳಂಗೋವಿಯನ್ನು ದೊಡ್ಡಣ್ಣ ನುಡಿಸುತ್ತಿದ್ದರು. ಸ್ಥಳೀಯ ಪ್ರತಿಭೆಗಳ ಸಾಮರ್ಥ್ಯವನ್ನು ಉನ್ನತೀಕರಿಸುವಂಥ ಭಜನೆ ಪದಗಳ ಮಹಾಪೂರವೇ ಅಲ್ಲಿ ಹರಿದು, ವಿನೀತವೂ, ಮಾನವೀಯವಾದ ವಾತಾವರಣವನ್ನು ಸೃಷ್ಟಿಸುತ್ತಿತ್ತು. ಯಾರಾದರೂ ಸರಿಯೇ ತಲೆದೂಗುವಂಥ ದೃಶ್ಯ ಅದು. ಆಧ್ಯಾತ್ಮಿಕ ಮತ್ತು ಸಾಮಾಜಿಕ ಗುಣಗಳನ್ನು ಸಮೀಕರಿಸಿಕೊಂಡಿದ್ದ ಭಜನೆಯಿಂದ ಏಳುತ್ತಿದ್ದ ತಂಗಾಳಿಗೆ ದೇಹಕ್ಕಾದ ಗಾಯಗಳನ್ನು ವಾಸಿ ಮಾಡುವ ಚಿಕಿತ್ಸಕ ಗುಣವಿರುತ್ತಿತ್ತು. ನನಗಿರುವ ಅನುಭವದ ಕೊರತೆಯಿಂದ ಭಜನೆಯ ಸುಗಂಧವನ್ನು ನಿಮಗೆ ಹೇಳಲು ತಡವರಿಸುತ್ತಿದ್ದೇನೆ. ನಮ್ಮ ಕೇರಿಯಲ್ಲಿದ್ದ ಅಶಿಕ್ಷಿತ ವಿದ್ವಜ್ಜನರು ಹಾಡುತ್ತಿದ್ದ ಒಂದು ಭಜನೆ ನನ್ನೊಳಗೆ ಈಗಲೂ ಇದೆ:

ಶ್ರೀಗುರುವಿಗೆ ಶರಣೋ
ಶಿವಯೋಗಿಗಳಿಗೆ ಶರಣೋ ।
ತಾನು ತನ್ನದು ಎನ್ನದಿಹ ಶ್ರೀಗುರುವಿಗೆ ಶರಣೋ॥

ಭಜನೆಯ ನಂತರ ಕಡ್ಲೆಪುರಿಯನ್ನು ಎಲ್ಲರಿಗೂ ಪ್ರಸಾದವೆಂದು ಹಂಚುವ ಪರಿಪಾಠವಿತ್ತು. ಇದರೊಂದಿಗೆ ಖಲಂದರ್ ಸಾಹೇಬರು ಮತ್ತು ಪೀರ್ ದಾ ಅವರು ಕಲ್ಲುಸಕ್ಕರೆಯ ತುಂಡನ್ನು ನೆರೆದಿದ್ದವರಿಗೆಲ್ಲಾ ಹಂಚುತ್ತಿದ್ದರು. ಭಜನೆ ಹಾಡುಗಳ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಅರ್ಥ ತಿಳಿಯದ ನಾವುಗಳು ಅವರು ಕೊಡುತ್ತಿದ್ದ ಕಲ್ಲುಸಕ್ಕರೆ ಮತ್ತು ಕಡ್ಲೆಪುರಿಗಾಗಿ ಅಲ್ಲಿಗೆ ತಪ್ಪದೆ ಹಾಜರಾಗುತ್ತಿದ್ದೆವು. ಹೀಗೆ ಭಜನೆಮನೆ ನಮ್ಮ ಕೇರಿಯನ್ನು ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಹಿಡಿದಿಟ್ಟದ್ದ ಆಧ್ಯಾತ್ಮಿಕ ಶ್ರದ್ಧೆಯ ಕೇಂದ್ರವಾಗಿತ್ತು.

ರಾಮನವಮಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಿದ್ದ ಖಲಂದರ್ ಸಾಹೇಬರು ಮತ್ತು ಪೀರ್ ದಾ ಅವರ ಬಗ್ಗೆ ಇಲ್ಲಿಯೇ ಹೇಳುವುದು ವಾಸಿ! ನಮ್ಮ ಕೇರಿಯಲ್ಲಿ ಇದ್ದದ್ದು ಎರಡೇ ಮುಸ್ಲಿಮರ ಮನೆ. ಒಂದು ತುದಿಯಲ್ಲಿ ಖಲಂದರ್ ಸಾಹೇಬರದು ಮತ್ತು ಅವರ ತಮ್ಮ ಪೀರ್ ದಾ ಅವರದು. ಕೇರಿಯಲ್ಲಿ ಎಲ್ಲರೂ ಇವರಿಬ್ಬರನ್ನೂ 'ದಾದಾ' ಎಂದೇ ಸಂಬೋಧಿಸಿ ಕರೆಯುತ್ತಿದ್ದರು. ನಮ್ಮ ಊರಿನಲ್ಲಿ ಅವರದು ಎನ್ನುವ ಒಂದು ಅಂಗೈಯಗಲದ ಭೂಮಿಯೂ ಇರಲಿಲ್ಲ. ಖಲಂದರ್ ದಾದಾ ಅವರು ಬೆಳ್ಳಾವಿಯಲ್ಲಿ ಹಾಸಿಗೆ ಹೊಲೆದುಕೊಡುವ ಸಣ್ಣ ಅಂಗಡಿಯನ್ನು ಇಟ್ಟುಕೊಂಡಿದ್ದರು. ಪೀರ್ ದಾ ಅವರು ಎತ್ತುಗಳಿಗೆ ಲಾಳ ಕಟ್ಟಲು ತಮ್ಮಲ್ಲಿದ್ದ ಪ್ರಾಚೀನವಾದ ಸೈಕಲ್ ಮೇಲೆ ಹಳ್ಳಿಗಳಿಗೆ ಹೋಗುತ್ತಿದ್ದರು. ಇದರ ಜೊತೆಗೆ ಹೊಂಗೆಬೀಜ, ಹುಣಸೇಬೀಜ, ಹುಣಸೇಹಣ್ಣನ್ನು ಹಳ್ಳಿಯವರಿಂದ ಕೊಂಡುಕೊಂಡು, ಅದನ್ನು ಚೇಳೂರು ಸಂತೆಯಲ್ಲೋ